ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೬

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

## ಸೋಮವಾರ, ದಿನಾಂಕ: ೨೧ನೇ ಸೆಪ್ಟೆಂಬರ್, ೨೦೨೦

---

### ಸಮೂಹ – I

೧. ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

೨. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

೪. ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೫. ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು

೬. ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

---

### ಶಬ್ದ ಮಾಲಿನ್ಯದ ಬಗ್ಗೆ

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೭೬ (೯೨೦) ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಮಸೀದಿ, ಚರ್ಚ್ ಮತ್ತು ದೇವಸ್ಥಾನಗಳಲ್ಲಿ ಆಗುತ್ತಿರುವ ಶಬ್ದ ಮಾಲಿನ್ಯದ ಬಗ್ಗೆ ಪರಿಸರ ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬೆಂಗಳೂರು ನಗರದಲ್ಲಿ ಶಬ್ದ ಮಾಲಿನ್ಯಕ್ಕೆ ಕಾರಣ ಆಗಿರುವ ಮೇಲ್ಕಂಡ ಧಾರ್ಮಿಕ ಕೇಂದ್ರಗಳ ಹೆಸರು ನೀಡುವುದು ;

(ಆ) ಮೇಲ್ಕಂಡ ಶಬ್ದ ಮಾಲಿನ್ಯವನ್ನು ಉಂಟು ಮಾಡುತ್ತಿರುವ ಧಾರ್ಮಿಕ ಕೇಂದ್ರಗಳ ಮೇಲೆ ಪರಿಸರ ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಇ) ಈ ಕುರಿತು "ಸುಪ್ರೀಮ್ ಕೋರ್ಟ್" ಮತ್ತು "ರಾಜ್ಯ ಉಚ್ಛ ನ್ಯಾಯಾಲಯ" ಶಬ್ದ ಮಾಲಿನ್ಯದ ಬಗ್ಗೆ ನೀಡಿರುವ ತೀರ್ಪು ಸರ್ಕಾರದ ಗಮನದಲ್ಲಿದೆಯೇ ;

(ಈ) ಮೇಲ್ಕಂಡ ತೀರ್ಪುಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ವಿಳಂಬ ಧೋರಣೆ ತೋರುತ್ತಿರುವುದು ನಿಜವೇ ;

(ಉ) ಬೆಂಗಳೂರಿನಲ್ಲಿ ಶಬ್ದ ಮಾಲಿನ್ಯ ಉಂಟು ಮಾಡುತ್ತಿರುವ ಧಾರ್ಮಿಕ ಕೇಂದ್ರಗಳಲ್ಲಿರುವ ಧ್ವನಿವರ್ಧಕಗಳನ್ನು ತೆಗೆಯುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಶಿಕ್ಷಕರ ಬಡ್ತಿ ವಿಚಾರ ಕುರಿತು

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೭೭ (೮೫೭) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು ೧೯೮೩, ೧೯೯೮ ಮತ್ತು ೨೦೦೮ರ ನಿಯಮಾವಳಿಗಳ ಪ್ರಕಾರ ಒಟ್ಟು ಖಾಲಿ ಹುದ್ದೆಗಳಲ್ಲಿ ಬ್ಲಾಕ್‌ವಾರು ವಿಷಯವಾರು ಶೇ.೫೦ರಷ್ಟು ನೇರ ನೇಮಕಾತಿ ಮತ್ತು ಶೇ.೫೦ರಷ್ಟು ಸ್ನಾತಕೋತ್ತರ ಪದವಿ ಪಡೆದ ಪ್ರೌಢ ಶಾಲಾ ಸಹಶಿಕ್ಷಕರಿಂದ ಬಡ್ತಿ ಮೂಲಕ ನೇಮಕಾತಿ ಮಾಡಲಾಗಿದೆಯೇ ; (ಕೋಟ ರೂಲ್ ಅನುಸರಿಸಿರುವ ಬಗ್ಗೆ ಮಾಹಿತಿ ನೀಡುವುದು)

(ಆ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ/ ೪೩ಸೇಕನಿ೮೭, ದಿನಾಂಕ:೧೪.೧೨.೧೯೮೭ರ ಪ್ರಕಾರ ಆದೇಶ ಪಾಲಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ; (ಮಾಹಿತಿ ಒದಗಿಸುವುದು)

(ಇ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ:೩೭.೩೮–೩೭೫೬/೨೦೦೯ರ ದಿನಾಂಕ:೨೭.೦೯.೨೦೧೦ರ ತೀರ್ಪನ್ನು ಪಾಲಿಸಲಾಗಿದೆಯೇ ;

(ಈ) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಪ್ರಕಟಿಸಿರುವ ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ಬಡ್ತಿ ಮತ್ತು ನೇರ ನೇಮಕಾತಿ ಹುದ್ದೆಗಳಲ್ಲಿರುವ ವ್ಯತ್ಯಾಸ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ವ್ಯತ್ಯಾಸಕ್ಕೆ ಕಾರಣಗಳೇನು ;

(ಉ) ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮ/ಆದೇಶ/ನ್ಯಾಯಾಲಯದ ತೀರ್ಪನ್ನು ಪಾಲಿಸಲಾಗಿದೆಯೇ ; (ಮಾಹಿತಿ ನೀಡುವುದು)

(ಊ) ಉಪನ್ಯಾಸಕರ ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನ್ಯತೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರಿಪಡಿಸಲು ಬೇಕಾಗುವ ಸಮಯವೆಷ್ಟು ?

## ಗೌರವ ಡಾಕ್ಟರೇಟ್ ಪದವಿಯ ದುರ್ಬಳಕೆ ಕುರಿತು

**ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೭೮ (೯೮೬) ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಜನರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಲಾಗಿದೆ ; (ವಿಶ್ವವಿದ್ಯಾಲಯವಾರು ಸಂಪೂರ್ಣ ವಿವರ ನೀಡುವುದು)

(ಆ) ಗೌರವ ಡಾಕ್ಟರೇಟ್ ಪದವಿಯ ಪರಿಗಣನೆಗೆ ಇರುವ ಮಾನದಂಡಗಳೇನು ;

(ಇ) ಹೊರ ರಾಜ್ಯ ಹಾಗೂ ಹೊರ ದೇಶಗಳ ವಿಶ್ವವಿದ್ಯಾಲಯಗಳಿಂದ ಪಡೆದಿರುವ ಡಾಕ್ಟರೇಟ್‌ಗಳ ಬಗ್ಗೆ ವಿವರ ನೀಡುವುದು ; ಆಯಾ ವಿಶ್ವವಿದ್ಯಾಲಯಗಳು ನೀಡಿರುವ ಡಾಕ್ಟರೇಟ್‌ಗಳ ಪವಿತ್ರತೆ ಬಗ್ಗೆ ಮಾಹಿತಿ ನೀಡುವುದು ;

(ಈ) ಅನೇಕ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯಗಳಿಂದ ನಕಲಿ/ಅನರ್ಹ ಡಾಕ್ಟರೇಟ್ ಪಡೆದಿರುವ ವ್ಯಕ್ತಿಗಳ ಮಾಹಿತಿ ನೀಡುವುದು ; ಹಗರಣಗಳಲ್ಲಿ, ಆಪಾದನೆಗಳಲ್ಲಿ, ಅಕ್ರಮ ವಾಮ ಮಾರ್ಗಗಳಲ್ಲಿ ಡಾಕ್ಟರೇಟ್ ನೀಡಿರುವ ವಿಶ್ವವಿದ್ಯಾಲಯಗಳಾವುವು ; ಪಡೆದಿರುವ ವ್ಯಕ್ತಿಗಳ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ವಿಶ್ವವಿದ್ಯಾಲಯಗಳಲ್ಲಿ ಅಪಾರ ಪರಿಶ್ರಮದಿಂದ ಪರಿಶೋಧನೆ ಮಾಡಿ ಪಡೆಯುವ ಅಧಿಕೃತ ಡಾಕ್ಟರೇಟ್ ಪದವಿಗಳ ಘನತೆ ಕುಗ್ಗಿಸುವ, ಇಂತಹ ಶಿಫಾರಸ್ಸು ಹಣದ ಪ್ರಭಾವದಿಂದ ಪಡೆದ ನಕಲಿ ಗೌರವ ಡಾಕ್ಟರೇಟ್ ದಂಧೆಗೆ ಕಡಿವಾಣ ಹಾಕಲು ಸರ್ಕಾರದ ಕ್ರಮಗಳೇನು ?

## ಅಂಜನಾದ್ರಿ ಬೆಟ್ಟಕ್ಕೆ ರೋಪ್‌ವೇ ನಿರ್ಮಾಣ ಕುರಿತು

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು) –**

೭೯ (೯೭೨) ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಳ್ಳಾರಿ ಜಿಲ್ಲೆಯ ಅಂಜನಾದ್ರಿ ಪವಿತ್ರ ಸ್ಥಳಕ್ಕೆ ರೋಪ್–ವೇ ನಿರ್ಮಿಸಲು ಸರ್ಕಾರ ಕ್ರಿಯಾಯೋಜನೆ ಸಿದ್ದಪಡಿಸಿದೆಯೇ ;

(ಆ) ಬಳ್ಳಾರಿ ನಗರದ ವೈಶಿಷ್ಟ್ಯವಾದ ಈ ಸ್ಥಳವು ವಿಶ್ವದಲ್ಲಿ ೨ನೇ ಎತ್ತರವಾದ ಬೆಟ್ಟ ಅನಿಸಿಕೊಂಡಿರುವ ಈ ಬೆಟ್ಟಕ್ಕೆ ರೋಪ್–ವೇ ಅಳವಡಿಸಬೇಕೆನ್ನುವ ಬೇಡಿಕೆ ಕಳೆದ ಹಲವಾರು ವರ್ಷಗಳಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಕೂಡಲೇ ಯೋಜನೆ ರೂಪಿಸಲಾಗುವುದೇ ?

## ಉಪನ್ಯಾಸಕರಿಂದ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಗಳಿಕೆ ರಜೆ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೮೦ (೮೬೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಉಪನ್ಯಾಸಕರಿಗೆ ಗಳಿಕೆ ರಜೆ ನಿರಾಕರಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೆ.ಸಿ.ಎಸ್.ಆರ್. ನಿಯಮ ೧೧೩(೩)ಎ ಮತ್ತು ಬಿ ಪ್ರಕಾರ ಪ್ರಭಾರ ಕರ್ತವ್ಯಕ್ಕೆ ಗಳಿಕೆ ರಜೆ ನೀಡಬೇಕು ಎಂದಿದ್ದರೂ ನಿರಾಕರಣೆ ಮಾಡುತ್ತಿರುವುದೇಕೆ ;

(ಇ) ಪ್ರಾಥಮಿಕ ಮತ್ತು ಪ್ರೌಢಶಾಲಾ ಹಿರಿಯ ಶಿಕ್ಷಕರುಗಳು ಪ್ರಭಾರ ಕರ್ತವ್ಯ ನಿರ್ವಹಿಸಿದಾಗ ಅವರುಗಳಿಗೆ ಗಳಿಕೆ ರಜೆ ನೀಡಿದ್ದು, ಪದವಿ ಪೂರ್ವ ಪ್ರಭಾರ ಪ್ರಾಂಶುಪಾಲರಿಗೆ ಗಳಿಕೆ ರಜೆಯ ನಿರಾಕರಣೆ ಸಮಾಜಿಕ ನ್ಯಾಯದ ಉಲ್ಲಂಘನೆ ಅಲ್ಲವೇ ? (ಪೂರ್ಣ ಮಾಹಿತಿ ಒದಗಿಸುವುದು)

## ಅರಣ್ಯ ಇಲಾಖೆಯಲ್ಲಿ ನೇಮಕಾತಿಯಲ್ಲಿನ ಅವ್ಯವಹಾರ ಕುರಿತು ACB ತನಿಖೆಗೆ ಅನುಮತಿ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೧ (೯೭೪+೯೩೩) ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅರಣ್ಯ ಇಲಾಖೆಯು ಅರಣ್ಯ ವೀಕ್ಷಕ ಹುದ್ದೆಯಿಂದ ಹಿಡಿದು ಅರಣ್ಯ ರಕ್ಷಕ, ಉಪವಲಯ ಅರಣ್ಯಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿ ಹುದ್ದೆಗಳವರೆಗೂ ಇಲಾಖೆಯ ನೇಮಕಾತಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ಈಗಾಗಲೇ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಪ್ರಕರಣ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

(ಆ) ಕಲಂ ೧೭(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–೧೯೮೮ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/೧೪/ಸೇಲೋಯು/೨೦೧೬, ಬೆಂಗಳೂರು ದಿನಾಂಕ:೧೪.೦೩.೨೦೧೬ರ ಕಂಡಿಕೆ (೫)ರ ರೀತ್ಯಾ ಪೂರ್ವಾನುಮತಿ ನೀಡುವಂತೆ ಭ್ರಷ್ಟಾಚಾರ ನಿಗ್ರಹ ದಳದಿಂದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅರಣ್ಯ ಪಡೆ ಮುಖ್ಯಸ್ಥರಿಗೆ ಬರೆದಿರುವ ಪತ್ರದ ಗೌಪ್ಯತೆಯನ್ನು ಇಲಾಖಾ

ಮುಖ್ಯಸ್ಥರು ಕಾಪಾಡುವಲ್ಲಿ ವಿಫಲರಾಗಿದ್ದು, ಈ ಕುರಿತು ಇವರ ವಿರುದ್ಧ ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ;

(ಇ) ಭ್ರಷ್ಟಾಚಾರ ನಿಗ್ರಹ ದಳದಿಂದ ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ತನಿಖೆಗೆ ಪೂರ್ವಾನುಮತಿ ಪಡೆಯಲು ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಅರಣ್ಯ ಪಡೆ ಮುಖ್ಯಸ್ಥರಿಗೆ ಕೋರಿದ್ದು, ಇದುವರೆವಿಗೆ ಅನುಮತಿ ನೀಡದೇ ವಿಳಂಬ ನೀತಿ ಅನುಸರಿಸಲಾಗುತ್ತಿದ್ದು, ಯಾವ ಕಾಲಮಿತಿಯೊಳಗೆ ತನಿಖೆ ನಡೆಸಲು ಅನುಮತಿ ನೀಡಲಾಗುವುದು ಮತ್ತು ವಿಳಂಬಕ್ಕೆ ಕಾರಣಗಳೇನು ;

(ಈ) ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಅಧಿಕಾರಿಗಳು ಅರಣ್ಯ ಭವನದಲ್ಲಿಯೇ ಮೊದಲಿನ ಪ್ರಭಾವಿ ಹುದ್ದೆಯಲ್ಲಿ ಮುಂದುವರಿಯುತ್ತಿರುವುದರಿಂದ, ಸಾಕ್ಷಿ ನಾಶ ಮಾಡದಂತೆ ತಡೆಯಲು ಸರ್ಕಾರ ಯಾವ ಕ್ರಮಕೈಗೊಳ್ಳುವುದು ; ಈ ಆರೋಪಿ ನೌಕರರನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆಗೊಳಿಸಿ ನ್ಯಾಯಸಮ್ಮತ ತನಿಖೆಗೆ ಸರ್ಕಾರ ಕ್ರಮಕೈಗೊಳ್ಳುವುದೇ ; ಆರೋಪಿತ ನೌಕರರನ್ನು ಯಾವ ಕಾಲಮಿತಿಯೊಳಗೆ ಸ್ಥಳ ಬದಲಾವಣೆ ಮಾಡಲಾಗುವುದು ?

**ರಾಜ್ಯದ ವಿದ್ಯುತ್ ಬೇಡಿಕೆ ಪೂರೈಕೆ ಖರೀದಿ ಹಾಗೂ ಸ್ವಾವಲಂಬನೆ ಬಗ್ಗೆ**

**ಡಾ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೨ (೯೮೪) ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿನ ವಿದ್ಯುತ್ ಬೇಡಿಕೆ ಪ್ರಮಾಣ ಎಷ್ಟು ; (ಗೃಹ, ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರಗಳ ಬೇಡಿಕೆ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು) ಬೆಂಗಳೂರು ನಗರದ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಂತರದ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳ ಬೇಡಿಕೆ ಮತ್ತು ಪೂರೈಕೆ ಕುರಿತು ಮಾಹಿತಿಯನ್ನು ಒದಗಿಸುವುದು ;

(ಇ) ಕೊರತೆಯಾಗುವ ವಿದ್ಯುತ್‌ನ್ನು ಸರಿದೂಗಿಸುವ ನಿಟ್ಟಿನಲ್ಲಿ ವಿದ್ಯುತ್ ಖರೀದಿ ಬಗ್ಗೆ ಸರ್ಕಾರದ ನಿಲುವು ಮತ್ತು ಇದುವರೆವಿಗೆ ಅನುಸರಿಸಿಕೊಂಡು ಬಂದಿರುವ ಮಾನದಂಡವೇನು ; (ಸಂಪೂರ್ಣ ವಿವರ ಒದಗಿಸುವುದು)

(ಈ) ಕಳೆದ ೩ ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರವು ಖರೀದಿಸಿರುವ ವಿದ್ಯುತ್ ಪ್ರಮಾಣ ಎಷ್ಟು ; ಯಾವ ಯಾವ ಮೂಲಗಳಿಂದ ಸಂಸ್ಥೆಗಳಿಂದ ಖರೀದಿಸಲಾಗಿದೆ ; ಇದಕ್ಕೆ ತಗುಲಿರುವ ವೆಚ್ಚ ಮತ್ತು ಪಾವತಿಸಲಾದ ಹಣವೆಷ್ಟು ; (ಸಂಸ್ಥೆವಾರು ಮಾಹಿತಿ ಒದಗಿಸುವುದು)

(ಉ) ವಿದ್ಯುತ್ ಬೇಡಿಕೆಯಲ್ಲಿ ರಾಜ್ಯವು ಸ್ವಾವಲಂಬನೆ ಹೊಂದುವ ನಿಟ್ಟಿನಲ್ಲಿ ಸರ್ಕಾರವು ದೂರದೃಷ್ಟಿ ಹೊಂದಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು ? (ಮಾಹಿತಿ ಒದಗಿಸುವುದು)

## ರಾಜ್ಯದಲ್ಲಿ ವಿದ್ಯುತ್ ಕಂಪನಿಗಳು ರೈತರ ಕೊಳವೆ ಬಾವಿಗಳಿಗೆ ವಿದ್ಯುತ್ ಪೂರೈಸುವ ಬಗ್ಗೆ

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩ (೯೨೭) ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ವಿದ್ಯುತ್ ಕಂಪನಿಗಳು ರೈತರ ಕೊಳವೆ ಬಾವಿಗಳಿಗೆ ವಿದ್ಯುತ್‌ನ್ನು ಪೂರೈಸಲು ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಅನುಸರಿಸಬೇಕಾಗಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿ ವಿದ್ಯುತ್ ಕಂಪನಿಗಳು ರೈತರ ಕೊಳವೆ ಬಾವಿಗಳಿಗೆ ವಿದ್ಯುತ್‌ನ್ನು ಪೂರೈಸಲು ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಗುತ್ತಿಗೆದಾರರು ನಿಗಧಿಪಡಿಸುತ್ತಿರುವ ಬೆಲೆಗಳೆಷ್ಟು ;

(ಇ) ಗುತ್ತಿಗೆದಾರರು ನಿಗಧಿಪಡಿಸುವ ಬೆಲೆಗಳನ್ನು ನೀಡಲಾಗದೆ ರೈತರು ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಸರ್ಕಾರ ಸೂಕ್ತ ಬೆಲೆಯನ್ನು ನಿಗದಿಪಡಿಸಬಹುದೇ ; ಇದಕ್ಕೆ ಬೇಕಾಗುವ ಕಾಲಾವಕಾಶವೆಷ್ಟು ?

## ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಕೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೪ (೮೦೦) ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ಸರ್ಕಾರವು ವಿದ್ಯುತ್‌ಚ್ಛಕ್ತಿ ಕಾಯಿದೆ, ೨೦೦೩ರ ಅನ್ವಯ ಕೃಷಿ ಪಂಪ್ ಸೆಟ್‌ಗಳನ್ನು ಹೊರತುಪಡಿಸಿ, ಎಲ್ಲಾ ಗ್ರಾಹಕರಿಗೆ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಗೆಜೆಟ್ ನೋಟಿಫಿಕೇಶನ್ ಹೊರಡಿಸಿರುವುದು ನಿಜವೇ ; (ಗೆಜೆಟ್ ಪ್ರತಿಯನ್ನು ಒದಗಿಸುವುದು) ಈ ನಿರ್ಧಾರದ ಪೂರ್ವಭಾವಿಯಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದಿಂದ ಮತ್ತು ಸಾರ್ವಜನಿಕರಿಂದ ಈ ಕುರಿತು ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿತ್ತೇ ; ಹೌದಾದ್ದಲ್ಲಿ, ಈ ಕುರಿತಾದ ದಾಖಲೆಯ ಪ್ರತಿಯನ್ನು ಒದಗಿಸುವುದು ; ಈ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರುವ ಚಿಂತನೆಯನ್ನು ಸರ್ಕಾರವು ಹೊಂದಿದೆಯೇ ;

(ಆ) ಈ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳ ಮಾರುಕಟ್ಟೆ ಬೆಲೆ ಎಷ್ಟು ; ಗ್ರಾಹಕರು ಈಗಾಗಲೇ ವಿದ್ಯುತ್ ಸಂಪರ್ಕ ಪಡೆಯುವಾಗ ಹಾಲಿ ಮೀಟರ್‌ಗಳಿಗೆ ವೆಚ್ಚ ಭರಿಸಿರುವುದರಿಂದ, ಈ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳ ವೆಚ್ಚವನ್ನು ಪುನಃ ಗ್ರಾಹಕರು ಭರಿಸಬೇಕಾಗುತ್ತದೆಯೇ ಅಥವಾ ಸರ್ಕಾರದಿಂದ ಭರಿಸಲಾಗುವುದೇ ;

(ಇ) ಸೇವೆಯ ಒಂದು ಭಾಗವಾಗಿರುವ ಕುಟೀರ ಜ್ಯೋತಿ ಮತ್ತು ಭಾಗ್ಯ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಲಾಗುವುದೇ ; ಮೀಟರ್ ಮತ್ತು ವಿದ್ಯುತ್ ಬಿಲ್‌ನ ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುವುದೇ ಅಥವಾ ಗ್ರಾಹಕರ ಮೇಲೆ ಡಿ.ಬಿ.ಟಿ.ಯನ್ನು ಹೇರುವ ಉದ್ದೇಶ ಹೊಂದಲಾಗಿದೆಯೇ ?

## ಆರೋಗ್ಯ ಸಂಜೀವಿನಿ ಸೌಲಭ್ಯವನ್ನು ನಿವೃತ್ತ ನೌಕರರಿಗೆ ವಿಸ್ತರಿಸುವ ಬಗ್ಗೆ

**ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) –**

೮೫ (೮೨೦) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ –

ಸರ್ಕಾರಿ ನೌಕರರಿಗೆ "ಆರೋಗ್ಯ ಸಂಜೀವಿನಿ" ಯೋಜನೆಯಡಿ ನಗದು ರಹಿತ ಚಿಕಿತ್ಸೆ ನೀಡುವ ರೀತಿ ನಿವೃತ್ತ ನೌಕರರಿಗೂ 'ಆರೋಗ್ಯ ಸಂಜೀವಿನಿ' ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಅತಿಥಿ ಉಪನ್ಯಾಸಕರ ಗೌರವ ಸಂಭಾವನೆ ಹೆಚ್ಚಿಸುವ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೮೬ (೮೭೫) ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಮಾಸಿಕ ನೀಡಲಾಗುತ್ತಿರುವ ಗೌರವ ಸಂಭಾವನೆ ಎಷ್ಟು ;

(ಆ) ಸದರಿ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರ ಚಿಂತಿಸುವುದೇ ;

(ಇ) ಯಾವ ಕಾಲಮಿತಿಯಲ್ಲಿ, ಎಷ್ಟು ಪ್ರಮಾಣದಲ್ಲಿ ಗೌರವ ಸಂಭಾವನೆಯನ್ನು ಹೆಚ್ಚಿಸಲಾಗುವುದು ;

(ಈ) ಸದರಿ ಉಪನ್ಯಾಸಕರನ್ನು ಖಾಯಂಗೊಳಿಸುವ ಚಿಂತನೆ ಸರ್ಕಾರದ ಮುಂದಿದೆಯೇ ;

(ಉ) ಹಾಗಿದ್ದಲ್ಲಿ, ಯಾವ ನಿಯಮಗಳನ್ನು ಅನುಸರಿಸಿ, ಯಾವ ಅವಧಿಯಲ್ಲಿ ಖಾಯಂಗೊಳಿಸಲಾಗುವುದು ;

(ಊ) ಪ್ರತಿ ತಿಂಗಳು ಸಕಾಲದಲ್ಲಿ ಗೌರವ ಸಂಭಾವನೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತರ ಶಾಲೆಗಳ ನಿರ್ದೇಶನಾಲಯದ ಅಧಿಕಾರದ ಕುರಿತು

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭ (೯೯೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಉರ್ದು ಹಾಗೂ ಇತರೆ ಅಲ್ಪಸಂಖ್ಯಾತರ ಭಾಷಾ ಶಾಲೆಗಳ ನಿರ್ದೇಶನಾಲಯ ಯಾವಾಗ ಅಸ್ತಿತ್ವಕ್ಕೆ ಬಂದಿರುತ್ತದೆ ; ಇದರ ಮುಖ್ಯ ಉದ್ದೇಶಗಳೇನು ; ಹಾಗೂ ಈ ನಿರ್ದೇಶನಾಲಯಕ್ಕಿರುವ ಆಡಳಿತಾತ್ಮಕ ಅಧಿಕಾರಗಳೇನು ;

(ಆ) ಸರ್ಕಾರಿ ಆದೇಶ ಸಂಖ್ಯೆ: ED 125 MES 86 ದಿನಾಂಕ:೨೬.೦೫.೧೯೮೭ರಲ್ಲಿ ನಿಗಧಿಪಡಿಸಿರುವಂತೆ ವಾಸ್ತವವಾಗಿ ನಿರ್ದೇಶನಾಲಯದ ವ್ಯಾಪ್ತಿಯಡಿಯಲ್ಲಿ ಯಾವ ಯಾವ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ನೀಡಲಾಗಿದೆ ;

(ಇ) ಉರ್ದು ಮತ್ತು ಇತರೆ ಅಲ್ಪಸಂಖ್ಯಾತರ ಭಾಷಾ ನಿರ್ದೇಶನಾಲಯಕ್ಕೆ ನಿಗದಿ ಪಡಿಸಿರುವ ಎಲ್ಲಾ ಆಡಳಿತಾತ್ಮಕ ವಿಷಯಗಳ ನಿರ್ಧಾರಗಳನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ನಿರ್ದೇಶಕರುಗಳೇ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸರ್ಕಾರಿ ಆದೇಶ ಸಂಖ್ಯೆ ED 125 MES 86 ದಿನಾಂಕ:೨೬.೦೫.೧೯೮೭ರಂತೆ ರಾಜ್ಯದ ಭಾಷಾ ಅಲ್ಪಸಂಖ್ಯಾತರ ಶಾಲೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು ನಿರ್ದೇಶಕರು, ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರಿಗೆ ಪೂರ್ಣ ಪ್ರಮಾಣದಲ್ಲಿ ಸ್ವತಂತ್ರ ಅಧಿಕಾರ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ; (ವಿವರ ನೀಡುವುದು)

(ಉ) ರಾಜ್ಯದ ಎಲ್ಲಾ ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಅಭಿವೃದ್ಧಿ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ನಿರ್ದೇಶಕರು, ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಸಂಪೂರ್ಣ ಸ್ವತಂತ್ರ ಆಡಳಿತಾತ್ಮಕ ಅಧಿಕಾರ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

## ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ಸಂಸ್ಥೆಯಲ್ಲಿ ಉಪಕರಣಗಳ ಖರೀದಿ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) –**

೮೮ (೯೫೬) ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಿಂದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ರಾಜಾಜಿನಗರ, ಬೆಂಗಳೂರು ಇವರ ಸಂಸ್ಥೆಯಲ್ಲಿ CNC ಮತ್ತು ಇತರೆ ಉಪಕರಣಗಳನ್ನು ಖರೀದಿ ಮಾಡಲಾಗಿದೆಯೇ ; (ಖರೀದಿ ವಿವರ, ಮೊತ್ತ ಹಾಗೂ ಸಂಬಂಧಿಸಿದ ಖರೀದಿ ಆದೇಶ ಪ್ರತಿಗಳನ್ನು ಒದಗಿಸುವುದು)

(ಆ) ಸದರಿ ಉಪಕರಣಗಳ ಖರೀದಿಗೆ ಸಂಬಂಧಪಟ್ಟಂತೆ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ರಾಜಾಜಿನಗರ ಸಂಸ್ಥೆಯಿಂದ ಹೊರಡಿಸಲ್ಪಟ್ಟ ಎಲ್ಲಾ ಟೆಂಡರ್ ಅಧಿಸೂಚನೆ ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನಿಯಮಾವಳಿಗಳು ಮತ್ತು ಟೆಂಡರ್‌ನಲ್ಲಿ ಭಾಗವಹಿಸಿರುವ ಸಂಸ್ಥೆಗಳಾವುವು ? (ಸಂಸ್ಥೆಗಳ ವಿವರ ಮತ್ತು ಭಾಗವಹಿಸಿರುವ ಸಂಸ್ಥೆಗಳು ಟೆಂಡರ್ ಡಾಕ್ಯುಮೆಂಟ್‌ನಲ್ಲಿರುವ ನಿಯಮಾವಳಿಗಳಿಗೆ ಬದ್ಧವಾಗಿರುವ ವಿವರದ ಪಟ್ಟಿಯನ್ನು ಒದಗಿಸುವುದು)

## ರಾಜ್ಯದಲ್ಲಿ ಕೋವಿಡ್–೧೯ ಸಂಬಂಧಿತ ಹೆಚ್ಚಿನ ಆರೋಗ್ಯ ಕೇಂದ್ರ ತೆರೆಯುವ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೪೯ (೯೧೭) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕೋವಿಡ್–೧೯ ಪ್ರಕರಣ ಮತ್ತು ಅದರ ಸಂಬಂಧಿತ ಸಮಸ್ಯೆಗಳ ದೃಷ್ಟಿಯಿಂದ ರಾಜ್ಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳು/ಆರೈಕೆ ಕೇಂದ್ರಗಳನ್ನು ಆರಂಭಿಸುವ ಕುರಿತು ಸರ್ಕಾರಕ್ಕೆ ಯೋಚನೆ ಇದೆಯೇ ;

(ಆ) ಯೋಚನೆ ಇದ್ದಲ್ಲಿ, ಇದಕ್ಕಾಗಿ ಜಿಲ್ಲಾವಾರು ಒದಗಿಸಿದ ಹಣ ಮತ್ತು ಇತರೆ ಸುಧಾರಣಾ ಕ್ರಮಗಳ ವಿವರಗಳೇನು ?

## ಬುಡಕಟ್ಟು ಜನರಿಗೆ ಅರಣ್ಯ ಸಂರಕ್ಷಣೆಯ ಕಾನೂನುಗಳಿಂದ ಆಗುತ್ತಿರುವ ಸಮಸ್ಯೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೯೦ (೯೪೯) ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅರಣ್ಯ ಸಂರಕ್ಷಣೆಯ ಕಾನೂನುಗಳಿಂದ ಬುಡಕಟ್ಟು ಜನರಿಗೆ ಆಗುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಬುಡಕಟ್ಟು ಜನರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.342/ಪಿ5

List of Questions
for Oral Answers

Total No. of
Questions - 15

# LIST - 06

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Monday, the 20th September, 2021

### GROUP - I

1. Minister for Higher Education, Information Technology and Bio-Technology, Science and Technology and Skill Development
2. Minister for Primary and Secondary Education and Sakala
3. Minister for Health and Family Welfare and Medical Education
4. Minister for Energy and Kannada and Culture
5. Minister for Tourism and Environment and Ecology
6. Minister for Forest, Food and Civil Supplies and Consumer Affairs

### NOISE POLLUTION

**Dr. Y.A. Narayanaswamy (Teachers' Constituency) -**

76 (920) Will the Minister for Tourism and Environment and Ecology be pleased to state:-

a. whether it has come to the notice of the Government that the noise pollution is being occured in masjid, chruch and temples in the limits of Bengaluru Urban; if so, the name of the religious centres for the cause of noise pollution in Bengaluru urban;

b. the measures taken by the Ecology department on the above religious centres which are causing pollution;

c. whether the Government is aware about the judgement pronounced by the Hon'ble Supreme Court and the High Court of the State regarding the noise pollution;

d. whether it is true that the delay is being caused by the Government for implementing the above judgements;

e. the steps taken by the Government to remove the loud speakers in the religious centres which are causing noise pollution in Bengaluru?

## PROMOTION OF TEACHERS

**Sri Ayanur Manjunath (Graduates' Constituency) -**

77 (857) Will the Minister for Primary and secondary education and Sakala be pleased to state:-

a. whether the appointment of Assistant teachers of High school have been promoted through 50% direct recruitment in block wise and subject wise and 50% from post graduates in the total vacant posts as per cadre and recruitment rules 1983, 1998 and 2008 of Lecturers of Government pre-university colleges; (the information about follow up of quota rule be furnished)

b. whether the official memorandum NO:DPAR/43 Sekani87, dated;14.12.1987 of Government of Karnataka order has been followed while preparing the seniority list of Lecturers of Government Pre-university colleges; if not, the reason therefor; (information be furnished)

c. whether the judgement of the Karnataka Administrative Tribunal Board application No:37.38-3756/2009 Dated:27.09.2010 has been followed while preparing the seniority list of Lecturers of Government Pre-university colleges;

d. whether it has come to the notice of the Government that there is a difference between the post of promotions and direct recruitment quota in the seniority list published by the Director, Pre-University College; if so, the reasons for the difference thereof;

e. whether the prevailing rule/order/judgement of the court has been followed presently while preparing the seniority list of the Lecturers; (information be furnished)

f. whether the Government is aware of the drawbacks in the seniority list of lecturers; if so, the timelimit required to redress the same?

**MISUSE OF HONORARY DOCTORATE DEGREES**

**Dr.Tejaswini Gowda (Elected by Legislative Assembly) -**

78 (986) Will the Minister for Higher Education, Information Technology and Bio-Technology, Science and Technology and Skill Development be pleased to state:-

a. the number of persons to whom the honorary doctorate degrees awarded to till date in the State; (universitywise complete details be furnished)

b. the criteria for consideration of honorary doctorate degree;

c. the details of doctorate degrees who obtained from the out of States and foreign universities; the information about the originality of doctorate degrees awarded by respective universities be furnished;

d. the information of the persons to whom have got fake/ incompetent doctorate degrees have been awarded from the universities in several cases be furnished; the particulars of universities which have awarded doctorate degree in scandal, allegations and illegal ways; whether it has come to the notice of the Government about the cases of persons who have been awarded degrees;

e. the measures taken by the Government to prevent the fake honorary doctorate degrees by awarding through recommendation and influence of money which will harm the dignity of authorised doctorate degrees awarded after lot of research and perseverance in the universities?

## CONSTRUCTION OF ROPEWAY TO ANJANADRI HILL

**Sri Allum Veerabhadrappa (Elected by Legislative Assembly)-**

79 (972) Will the Minister for Tourism and Environment and Ecology be pleased to state:-

a. whether the Government has prepared the action plan to construct ropeway to Holy Anjanadri place in Ballari district;

b. whether it has come to the notice of the Government that there is a proposal from many years for construction of the ropeway to this hill which is distinguished place in Ballari city and second tallest hill in the world;

c. if so, whether the plan would be prepared immediately?

## EARNED LEAVE OF THE LECTURERS WORKING AS INCHARGE PRINCIPALS

**Sri S.L. Bojegowda (Teachers' Constituency) -**

80 (864) Will the Minister for Primary and Secondary Education and Sakala be pleased to state:-

a. whether it has come to notice of the Government that the sanctioning of earned leave is being denied to senior lecturers who are working as incharge principal in Government pre-university colleges;

b. the reason for the denial evenafter there is a rule to sanction earned leave to incharge duty as per KCSR rule 113 (3) A and B;

c. whether it is not a violation of social justice for denying earned leave to incharge principals of the pre-university college at the same time earned leave has been sanctioned to the senior teachers of Primary and Secondary school who carried incharge duty? (complete information be furnished)

## GRANTING PERMISSION TO ACB INVESTIGATION REGARDING IRREGULARITIES OF RECRUITMENT IN FOREST DEPARTMENT

**Sri Puttanna (Teachers' Constituency) -**

**Sri Naseer Ahmed (Elected by Legislative Assembly) -**

81 (974+933) Will the Minister for Forest, Food and Civil Supplies and Consumer Affairs be pleased to state:-

a. whether it has come to the notice of the Government that the case has been registered already in Anti-Corruption Bureau in connection with irregularity is being occurred in recruitment of Forest watchers, Forest Guards, Deputy Range Forest Officers and Range Forest Officer post in Forest department;

b. the head of the department has failed to maintain the confidentiality of the letter written by the Anti Corruption Bureau to Principal Chief Conservator of Forests and Head of Forest Force for retrospective permission as per section 17(A) of the prevention of Corruption Act, 1988 and as per Government Order No:DPAR/SeLoU/2016 Bengaluru dated:14.03.2016 of para (5), the timelimit within which the action would be taken against the concerned persons in this regard;

c. the requisition has been submitted to the Principal Chief Conservator of Forests by the Anti-Corruption Bureau for getting the retrospective permission to the

investigation against the officers who have involved in illegal recruitment; the delay tactic is being followed without permission to till date; the timelimit within which the permission would be given for conducting investigation and the reasons for the delay;

d. the action that would be taken by the Government to prevent the witness from being destroyed due to the alleged officers who have involved in illegal recruitment in continuing in the previous influential post in Aranya Bhavan; whether the Government would take action for fair investigation by reliving the alleged employee from the current post; the timelimit within which the alleged officer would be transferred?

## ELECTRICITY DEMAND, SUPPLY, PURCHASE AND SELFRELIANCE IN THE STATE

**Dr. K. Govindaraj (Elected by Legislative Assembly) -**

82 (984) Will the Minister for Energy and Kannada and Culture be pleased to state:-

a. the total demand of electricity in the State; (the complete separate information regarding demand of electricity to households industries including other fields be furnished) separate information regarding demand and supply of the electricity in Bengaluru city be furnished;

b. whether the Government is aware about the proximity in demand and supply of electricity in the State; if so, information regarding demand and supply for the last 3 years be furnished;

c. the stand of the Government regarding purchase of electricity with regard to balancing the shortage of electricity and the criteria that has been followed so far; (complete information be furnished)

d. the quantity of electricity purchased by the State Government for the last 3 years; the particulars of sources and companies from which it has been purchased; the amount incurred therefor and the amount paid for the same; (companywise information be furnished)

e. whether the Government has envisioned with regard to the State has to be self-reliant in demand of electricity; if so, the measures taken in this regard? (information be furnished)

**SUPPLY OF ELECTRICITY TO BOREWELLS OF FARMERS**

**Sri Mane Shrinivas (Local Authorities Constituency) -**

83 (927) Will the Minister for Energy and Kannada and Culture be pleased to state:-

a. the measures that have been followed to get electricity supply, new T.Cs and new connection to borewells of farmers by electricity companies in the State;

b. the price is being fixed by the contractors to get supply of electricity, new T.Cs new connection to the borewells of farmers by the electricity companies in the State;

c. whether it has come to the notice of the Government that the farmers are facing hardship due to the price fixed by the contractors which are not paid by them;

d. whether the Government prescribed the fair price to get new T.Cs and new connections; the timelimit for the same?

**INSTALLATION OF PRE-PAID SMART METER**

**Sri K. Prathapachandra Shetty (Local Authorities Constituency) -**

84 (800) Will the Minister for Energy and Kannada and Culture be pleased to state:-

a. whether it is true that the Central Government has been issued Gazette Notification regarding the compulsory installation of Prepaid Smart Meter for all customers except agriculture pumpsets as per the Electricity Act of 2003; (Gazette copy be furnished) whether the provision has been provided by the Central Government for submission of objection by the State Government and public before this decision; if so, the copy of the document in this regard be furnished; whether the Government has contemplated to enforce this policy in the State;

b. the market price of the said prepaid smart meter; whether the expenditure of the prepaid smart meters has to be paid again by the customers or the Government due to the expenditure already paid by customers for the existing meters while obtaining electricity connection;

c. whether the installation of prepaid smart meters under the Kutera Jyothi and Bhagya Jyothi Scheme as a part of service; whether the expenditure of the meter and electricity bill would be paid by the Government or whether it is intended to impose D.B.T on customers?

## AROGYA SANJEEVINI FACILITY TO RETIRED EMPLOYEES

**Sri A. Devegowda (Graduates' Constituency) -**

85 (820) Will the Minister for Health and Family Welfare and Medical Education be pleased to state:-

a. the steps taken by the Government to provide "Arogya Sanjeevini Scheme" facility for retired employees in the lane of cashless treatment under the scheme of "Arogya Sanjeevini" to the Government employees?

## INCREASE OF HORORARIUM TO THE GUEST LECTURERS

**Sri Marithibbe Gowda (Teachers' Constituency) -**

86 (875) Will the Minister for Higher Education, Information Technology and Bio-Technology, Science and Technology and Skill Development be pleased to state:-

a. the amount of honorarium which is being paid monthly to the guest lecturers who are working in Government First Grade Colleges;

b. whether the Government would be contemplated to increase the honorarium;

c. the timelimit within which the honorarium amount would be increased;

d. whether the Government contemplated has to regularise the said lecturers;

e. if so, the year from which the said lecturers would be regularised by following which rules;

f. whether the step would be taken to pay the honorarium in time every month?

## THE POWERS OF THE DIRECTORATE OF URDU AND OTHER LINGUISTIC MINORITY SCHOOLS

**Sri Naseer Ahamed (Elected by Legislative Assembly) -**

87 (994) Will the Minister for Primary and Secondary Education and Sakala be pleased to state:-

a. the date on which the Directorate of Urdu and Other Linguistic Minority Language schools was established which is coming under the Education department; the objectives of the schools; and the administrative powers of the directorate;

b. the power which has been assigned actually to perform the various administrative powers under the Directorate as prescribed in the Government order No: ED 125 MES 86 dated:26.05.1987;

c. whether it has come to the notice of the Government that the Directorates of Primary and Secondary education themselves executing the decisions of all administrative subjects which are prescribed to Directorate of Urdu and Other Linguistic Minority schools;

d. the impediments before the Government for assigning complete independent charge to Director of Urdu and Other Linguistic Minority schools for executing all administrative powers in connection with Linguistic Minority schools of the state as per the Government order No:ED:125 MES 86 dated:26.05.1987; (details be furnished)

e. whether the Government would take the action to assign the complete independent administrative charge to the Director of Urdu and other Linguistic Minority schools for the development of all the linguistic minority schools and for the sake of academic education of the State?

## PURCHASE OF EQUIPMENTS IN GOVERNEMTN TOOL ROOM AND TRAINING CENTRE

**Sri P.R. Ramesh (Nominated) -**

88 (956) Will the Minister for Higher Education, Information Technology and Bio-Technology, Science and Technology and Skill Development be pleased to state:-

a. whether CNC and other equipments have been purchased in Government Tool Room and Training Centre (GTTC), Rajajinagar, Bengaluru for the last three years; (details of purchase, the amount and the related order copy of the purchase be furnished)

b. the particulars of institutions that have been participated in all tender notification, tender document, tender regulations and the tender issued by Government Tool Room and Training Centre, Rajajinagar regarding the purchase of the said equipments; the detailed list of companies which have participated and list of the participated companies which have complied with rules mentioned in Tender document?

## OPENING OF THE MORE HEALTH CONTRES IN VIEW OF COVID-19

**Sri U.B. Venkatesh (Nominated) -**

89 (917) Will the Minister for Health and Family Welfare and Medical Education be pleased to state:-

a. whether the plan before the Government for opening more hospitals/health care centres in the urban and rural areas of the State in view of the Covid-19 cases and in view of its associated problems in the State;

b. if so, the details of the amount released districtwise and other reformative measures taken in this regard?

## PROBLEMS OF TRIBALS FROM CONSERVATION OF FOREST LAW

**Sri Shantharama Budna Siddi (Nominated) -**

90 (989) Will the Minister for Forest, Food and Civil Supplies and Consumer Affairs be pleased to state:-

a. whether it has come to the notice of the Government that Tribals are facing problems from conservation of Forest Law;

b. if so, the measures taken by the Government to redress the problems of Tribal? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 333 - 750 Copies